JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕವಿ ಅಂಶುಮಾಲಿ ಕಾವ್ಯಯಾನ

**ಡಾ। ಗುಲಾಬಿ ಪೂಜಾರಿ**

ಕನ್ನಡ ಉಪನ್ಯಾಸಕರು

ಸಂತ ಮೇರಿ ಕಾಲೇಜು,ಶಿರ್ವ

ಅಂಶುಮಾಲಿ ಕಾವ್ಯನಾಮದಿಂದ ಜನಪ್ರಿಯರಾದ ಕವಿ ಭಾಸ್ಕರ ಕನ್ಯಾನರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕನ್ಯಾನದಲ್ಲಿ. ಇವರ ಮೂಲ ಕೇರಳದ ಕಣ್ಣಾನೂರು. ಮಾತೃ ಭಾಷೆ ಮಲಯಾಳಂ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರ ಸಾಹಿತ್ಯದ ನಾನಾ ಪ್ರಕಾರಗಳು. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೃತ್ತಿಯಲ್ಲಿ ಭಾರತ ಸರಕಾರದ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಸುಧೀರ್ಘ ಸೇವೆಯ ಬಳಿಕ ಸ್ವಯಂ ನಿವೃತ್ತಿಯನ್ನು ಪಡೆದಿರುತ್ತಾರೆ. ಇವರ ಮೊದಲ ಕವನ ಸಂಕಲನ 'ಕನ್ಯಾನ'ಕ್ಕೆ ೧೯೯೨ರಲ್ಲಿ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಎರಡನೇಯ ಕವನ ಸಂಕಲನ 'ಪ್ರತಿಭಾನ'ಕ್ಕೆ ಮದ್ದಣ ಕಾವ್ಯ ಪ್ರಶಸ್ತಿ (೨೦೦೧) ಪಡೆದಿರುತ್ತಾರೆ. ಇವರ ಮೂರನೇಯ ಕವನ ಸಂಕಲನ 'ಕನ್ನಡ-ಕ'-೨೦೦೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಅವಿಭಜಿತ ದಕ್ಷಿಣ ಕನ್ನಡದ ಎರಡು ಪ್ರಸಿದ್ಧ ಪ್ರಶಸ್ತಿಗಳಾದ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಮುದ್ದಣ ಕಾವ್ಯ ಪ್ರಶಸ್ತಿ ಪಡೆದಿದ್ದರೂ, ಅಂಶುಮಾಲಿಯವರನ್ನು ಓದಿಕೊಂಡ ವರ್ಗ ಕಡಿಮೆ. ಇದಕ್ಕೆ ಕಾರಣ ಬಹುಶಃ ಈಗಾಗಲೇ ಹೆಸರು ಮಾಡಿದವರು ಬರೆದದ್ದೆಲ್ಲಾ ಶ್ರೇಷ್ಠ ಎಂಬ ಭಾವವೂ ಇರಬಹುದು. ಪ್ರಸಿದ್ಧ ಪಾಶ್ಚಾತ್ಯ ವಿಮರ್ಶಕ ಟಿ.ಎಸ್. ಎಲಿಯಟ್ ಹೇಳುವಂತೆ 'ಈಗಾಗಲೇ ಪ್ರಸಿದ್ಧ ಕವಿಗಳು ಬರೆದದ್ದೆಲ್ಲಾ ಶ್ರೇಷ್ಠ ಎಂಬ ಪೂರ್ವಾಗ್ರಹವನ್ನು ಇಟ್ಟುಕೊಂಡು ವಿಮರ್ಶಕ ವಿಮರ್ಶೆ ಮಾಡಬಾರದು. ಹಲವು ಪ್ರಸಿದ್ಧ ಕೃತಿಗಳನ್ನು ಬರೆದ ಕವಿ ಕೂಡ ಆತನ ಮುಂದಿನ ರಚನೆ ಈಗಾಗಲೇ ಬಂದವುಗಳಿಗಿಂತ ಕೆಟ್ಟದಾಗಿರಬಹುದು. ಇದನ್ನು ಒರೆಗೆ ಹಚ್ಚುವ ಸಾಮರ್ಥ್ಯ ವಿಮರ್ಶಕ ಮತ್ತು ಓದುಗರಿಗೆ ಇರಬೇಕು' ಎನ್ನುತ್ತಾನೆ. ಉದಾ: ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ದ.ರಾ. ಬೇಂದ್ರೆಯವರ 'ತಾಲೆಕ್ಕಣಕೀತಾದೌತಿ' ಕಾವ್ಯ ಇದೊಂದು ಕೇವಲ ಪದಗಳ ಮ್ಯಾಜಿಕ್ ಮಾತ್ರ, ಕೇವಲ ಪ್ರಯೋಗಶೀಲತೆಗಾಗಿಯೇ ಇದನ್ನು ಬರೆದರು. 'ನಾನೇರಿದೆತ್ತರಕೆ ನೀನೇರಬಲ್ಲೆಯಾ' ಎಂದು ಸವಾಲು ಹಾಕಿದ ಶ್ರೇಷ್ಠ ಕವಿ ಕುವೆಂಪುರವರು ಬರೆದದ್ದರಲ್ಲಿಯೂ ಕೆಲವು ಕಬ್ಬಿಣದ ಕಡಲೆಗಳಿವೆ. ಕವಿ ಗೋಪಾಲಕೃಷ್ಣ ಅಡಿಗರು. ಆರಂಭದಲ್ಲಿ ಸರಳ ನೇರ ಗೇಯ ಪ್ರಧಾನವಾದ ಮೋಹನ ಮುರಳಿಯಂತಹ ಕಾವ್ಯವನ್ನು ಬರೆದ ನಂತರ ನವ್ಯಕ್ಕೆ ನೆಗೆದವರು. ಹಾಗೆಯೇ ಅಂಶುಮಾಲಿಯವರ ಕಾವ್ಯದ ಪ್ರಧಾನ ಗುಣ ಗೇಯತೆಯೇ ಆಗಿದೆ. ಇಲ್ಲಿಂದ ಸಾಗಿ 'ಶ್ರೀ ಭಾಗವತ' ಮುಕ್ತ ಛಂದಸ್ಸಿನ ಮಹಾಕಾವ್ಯದವರೆಗೆ ಅಂಶುಮಾಲಿಯವರ ಕಾವ್ಯ ಸಾಗಿಕೊಂಡು ಬಂದಿದೆ. ಆಧ್ಯಾತ್ಮದಿಂದ ಹಿಡಿದು, ತಾಯಿನುಡಿ, ತಾಯ್ನೆಲ, ಗಡಿಸಮಸ್ಯೆ, ಧರ್ಮ, ಸ್ತ್ರೀವಾದ, ಬಂಡಾಯ ಎಲ್ಲವೂ ಇವರ ಕಾವ್ಯದ ವಸ್ತುವಾಗಿದೆ.

ನವೋದಯದ ಕಾಲವನ್ನು ಮೀರಿ ನವ್ಯವನ್ನು ಹಾದು ಬಂದೂ, ತನ್ನ ಕಾವ್ಯಗಳಲ್ಲಿ ಲಯದ, ಗೇಯತೆಯನ್ನು ಸ್ಥಾಯಿಭಾವವಾಗಿಸಿಕೊಂಡು ಬರೆದದ್ದು ಇವರ ಕಾವ್ಯಕ್ಕೆ ಕಸುವನ್ನು ತುಂಬುವ ಕೆಲಸವನ್ನು ಮಾಡಿದೆ. ಆ ಕಾರಣಕ್ಕಾಗಿಯೇ

ಇವರ ಕಾವ್ಯಗಳನ್ನು ಓದುವ ಕಾವ್ಯ, ಹಾಡುವ ಕಾವ್ಯ, ಮತ್ತು ಓದಿ–ಹಾಡುವ ಕಾವ್ಯ ಎಂದು ವಿಭಾಗಿಸಬಹುದು. ಅಂಶುಮಾಲಿಯವರ ಮಾತೃಭಾಷೆ ಮಲೆಯಾಳಂ ಆದರೂ, ಕನ್ನಡ ನಾಡು ನುಡಿಯ ಬಗ್ಗೆ ಶ್ರೀಯುತರಿಗೆ ವಿಶೇಷವಾದ ಅಕ್ಕರೆ ಇದೆ. ಇವರ 'ಕನ್ನಡ–ಕ' ಸಂಕಲನದಲ್ಲಿರುವ ಅದೇ ಹೆಸರಿನ ಕಾವ್ಯವನ್ನು ನೋಡಬಹುದು.

ಅಂಶುಮಾಲಿ ಕಾವ್ಯನಾಮದಿಂದ ಜನಪ್ರಿಯರಾದ ಕವಿ ಭಾಸ್ಕರ ಕನ್ಯಾನರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕನ್ಯಾನದಲ್ಲಿ. ಇವರ ಮೂಲ ಕೇರಳದ ಕಣ್ಣಾನೂರು. ಮಾತೃ ಭಾಷೆ ಮಲಯಾಳಂ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರ ಸಾಹಿತ್ಯದ ನಾನಾ ಪ್ರಕಾರಗಳು. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ವೃತ್ತಿಯಲ್ಲಿ ಭಾರತ ಸರಕಾರದ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಸುಧೀರ್ಘ ಸೇವೆಯ ಬಳಿಕ ಸ್ವಯಂ ನಿವೃತ್ತಿಯನ್ನು ಪಡೆದಿರುತ್ತಾರೆ. ಇವರ ಮೊದಲ ಕವನ ಸಂಕಲನ 'ಕನ್ಯಾನ'ಕ್ಕೆ ೧೯೯೨ರಲ್ಲಿ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಎರಡನೇಯ ಕವನ ಸಂಕಲನ 'ಪ್ರತಿಭಾನ'ಕ್ಕೆ ಮದ್ದಣ ಕಾವ್ಯ ಪ್ರಶಸ್ತಿ (೨೦೦೧) ಪಡೆದಿರುತ್ತಾರೆ. ಇವರ ಮೂರನೇಯ ಕವನ ಸಂಕಲನ 'ಕನ್ನಡ–ಕ'–೨೦೦೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಅವಿಭಜಿತ ದಕ್ಷಿಣ ಕನ್ನಡದ ಎರಡು ಪ್ರಸಿದ್ಧ ಪ್ರಶಸ್ತಿಗಳಾದ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಮುದ್ದಣ ಕಾವ್ಯ ಪ್ರಶಸ್ತಿ ಪಡೆದಿದ್ದರೂ, ಅಂಶುಮಾಲಿಯವರನ್ನು ಓದಿಕೊಂಡ ವರ್ಗ ಕಡಿಮೆ. ಇದಕ್ಕೆ ಕಾರಣ ಬಹುಶಃ ಈಗಾಗಲೇ ಹೆಸರು ಮಾಡಿದವರು ಬರೆದದ್ದೆಲ್ಲಾ ಶ್ರೇಷ್ಠ ಎಂಬ ಭಾವವೂ ಇರಬಹುದು. ಪ್ರಸಿದ್ಧ ಪಾಶ್ಚಾತ್ಯ ವಿಮರ್ಶಕ ಟಿ.ಎಸ್. ಎಲಿಯಟ್ ಹೇಳುವಂತೆ 'ಈಗಾಗಲೇ ಪ್ರಸಿದ್ಧ ಕವಿಗಳು ಬರೆದದ್ದೆಲ್ಲಾ ಶ್ರೇಷ್ಠ ಎಂಬ ಪೂರ್ವಾಗ್ರಹವನ್ನು ಇಟ್ಟುಕೊಂಡು ವಿಮರ್ಶಕ ವಿಮರ್ಶೆ ಮಾಡಬಾರದು. ಹಲವು ಪ್ರಸಿದ್ಧ ಕೃತಿಗಳನ್ನು ಬರೆದ ಕವಿ ಕೂಡ ಆತನ ಮುಂದಿನ ರಚನೆ ಈಗಾಗಲೇ ಬಂದವುಗಳಿಗಿಂತ ಕೆಟ್ಟದಾಗಿರಬಹುದು. ಇದನ್ನು ಒರೆಗೆ ಹಚ್ಚುವ ಸಾಮರ್ಥ್ಯ ವಿಮರ್ಶಕ ಮತ್ತು ಓದುಗರಿಗೆ ಇರಬೇಕು' ಎನ್ನುತ್ತಾನೆ. ಉದಾ: ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ದ.ರಾ. ಬೇಂದ್ರೆಯವರ 'ತಾಲೆಕ್ಕಣಕೀತಾದೌತಿ' ಕಾವ್ಯ ಇದೊಂದು ಕೇವಲ ಪದಗಳ ಮ್ಯಾಜಿಕ್ ಮಾತ್ರ, ಕೇವಲ ಪ್ರಯೋಗಶೀಲತೆಗಾಗಿಯೇ ಇದನ್ನು ಬರೆದರು. 'ನಾನೇರಿದೆತ್ತರಕೆ ನೀನೇರಬಲ್ಲೆಯಾ' ಎಂದು ಸವಾಲು ಹಾಕಿದ ಶ್ರೇಷ್ಠ ಕವಿ ಕುವೆಂಪುರವರು ಬರೆದದ್ದರಲ್ಲಿಯೂ ಕೆಲವು ಕಚ್ಚಿಣದ ಕಡಲೆಗಳಿವೆ. ಕವಿ ಗೋಪಾಲಕೃಷ್ಣ ಅಡಿಗರು. ಆರಂಭದಲ್ಲಿ ಸರಳ ನೇರ ಗೇಯ ಪ್ರಧಾನವಾದ ಮೋಹನ ಮುರಳಿಯಂತಹ ಕಾವ್ಯವನ್ನು ಬರೆದ ನಂತರ ನವ್ಯಕ್ಕೆ ನೆಗೆದವರು. ಹಾಗೆಯೇ ಅಂಶುಮಾಲಿಯವರ ಕಾವ್ಯದ ಪ್ರಧಾನ ಗುಣ ಗೇಯತೆಯೇ ಆಗಿದೆ. ಇಲ್ಲಿಂದ ಸಾಗಿ 'ಶ್ರೀ ಭಾಗವತ' ಮುಕ್ತ ಛಂದಸ್ಸಿನ ಮಹಾಕಾವ್ಯದವರೆಗೆ ಅಂಶುಮಾಲಿಯವರ ಕಾವ್ಯ ಸಾಗಿಕೊಂಡು ಬಂದಿದೆ. ಆಧ್ಯಾತ್ಮದಿಂದ ಹಿಡಿದು, ತಾಯಿನುಡಿ, ತಾಯ್ನೆಲ, ಗಡಿಸಮಸ್ಯೆ, ಧರ್ಮ, ಸ್ತ್ರೀವಾದ, ಬಂಡಾಯ ಎಲ್ಲವೂ ಇವರ ಕಾವ್ಯದ ವಸ್ತುವಾಗಿದೆ.

ನವೋದಯದ ಕಾಲವನ್ನು ಮೀರಿ ನವ್ಯವನ್ನು ಹಾದು ಬಂದೂ, ತನ್ನ ಕಾವ್ಯಗಳಲ್ಲಿ ಲಯದ, ಗೇಯತೆಯನ್ನು ಸ್ಥಾಯಿಭಾವವಾಗಿಸಿಕೊಂಡು ಬರೆದದ್ದು ಇವರ ಕಾವ್ಯಕ್ಕೆ ಕಸುವನ್ನು ತುಂಬುವ ಕೆಲಸವನ್ನು ಮಾಡಿದೆ. ಆ ಕಾರಣಕ್ಕಾಗಿಯೇ ಇವರ ಕಾವ್ಯಗಳನ್ನು ಓದುವ ಕಾವ್ಯ, ಹಾಡುವ ಕಾವ್ಯ, ಮತ್ತು ಓದಿ–ಹಾಡುವ ಕಾವ್ಯ ಎಂದು ವಿಭಾಗಿಸಬಹುದು. ಅಂಶುಮಾಲಿಯವರ ಮಾತೃಭಾಷೆ ಮಲೆಯಾಳಂ ಆದರೂ, ಕನ್ನಡ ನಾಡು ನುಡಿಯ ಬಗ್ಗೆ ಶ್ರೀಯುತರಿಗೆ ವಿಶೇಷವಾದ ಅಕ್ಕರೆ ಇದೆ. ಇವರ 'ಕನ್ನಡ–ಕ' ಸಂಕಲನದಲ್ಲಿರುವ ಅದೇ ಹೆಸರಿನ ಕಾವ್ಯವನ್ನು ನೋಡಬಹುದು.

'ಕನ್ನಡಕವೆಲ್ಲಿ ? ಕೇಳಿದೆ ನಾನು ಮಡದಿಯನು

ಹೇಳಿದಳು ಅವಳು : ಇನ್ ಕಂಡಿಟಿಲ್ಲ

ಮಗನ ಕೇಳಲು ಹೇಳಿದನು : ಐಡೋಂಟ್ ನೋ

ಮಗಳು ಹೇಳಿದಳು : ಮೈನೇ ನಹೀಂ ದೇಖಾ

ಕನ್ನಡದ ಗಡಿಯಲ್ಲಿ ಎನ್ನಡಾ ಭಾವುವವು

ತಲೆಬಾಗಿ ಕೈಮುಗಿದು ನಿಂತಗಳಿಗೆ

ಇದೇ ಸಂಕಲನದ ಇನ್ನೊಂದು ಕವಿತೆ "ನವಕರ್ನಾಟಕ"

"ಬೆಳಗಾವಿಯಲಿದೆ ಕನ್ನಡ ತೇರು

ಕಾಸರಗೋಡು ಕನ್ನಡ ದೇವರು

ಕನ್ನಡ ತೇರನು ಎಳೆದವರೆಲ್ಲಿ"

ಎನ್ನಡ–ಎಕ್ಕಡದ ನಡುವೆ ಕನ್ನಡ ಕಳೆದು ಹೋಗುತ್ತಿದೆ ಎಂಬ ಆತಂಕದ ನಡುವೆ ಕಾವೇರಿಯಿಂದ ಗೋದಾವರಿಯವರೆಗೆ ವ್ಯಾಪಿಸಿರುವ ಕರ್ನಾಟಕದಲ್ಲಿ ಕನ್ನಡ ಹರಿದು ಹಂಚಿಹೋಗಿದೆ. ಕನ್ನಡಿಗರಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ. ಎಲ್ಲರಿಗೂ ಇಂಗ್ಲೀಷ್ ಮೇಲಿನ ಮೋಹ ಹೆಚ್ಚಾಗಿದೆ. ಯಾವುದೋ ಉದ್ದೇಶದಿಂದ ಕರ್ನಾಟಕವನ್ನು ಪ್ರವೇಶಿಸಿದ ಅಕ್ಕಪಕ್ಕದ ರಾಜ್ಯದವರು ಅವರು ಕನ್ನಡ ಕಲಿಯುವ ಅನಿವಾರ್ಯತೆ ಉಂಟಾಗದೆ, ತಮ್ಮ ಮಾತೃಭಾಷೆಗಳನ್ನು ಇಲ್ಲಿನ ಜನರಿಗೆ ಉಚಿತವಾಗಿ ಕೊಟ್ಟು, ಕನ್ನಡಕ್ಕೆ ಹೊಡೆತವನ್ನು ನೀಡುತ್ತಿದ್ದಾರೆ. ಆದ್ದರಿಂದ ಆಡಳಿತದ ಚುಕ್ಕಾಣಿ ಹಿಡಿದಿಡುವವರು ಕನ್ನಡದ ಉಳಿವಿಗಾಗಿ ಕಠಿಣ ನಿರ್ಧಾರ ತಳೆಯ ಬೇಕಾದ ಅನಿವಾರ್ಯತೆ ಇದೆ. ಇಲ್ಲದೆ ಹೋದರೆ ಕನ್ನಡಕ್ಕೆ ಸಂಕಟ ಖಂಡಿತ ಎಂಬ ಕಾಳಜಿ ಅಂಶುಮಾಲಿಯವರ ಈ ಬಗೆಯ ಕವನಗಳಲ್ಲಿ ವ್ಯಕ್ತವಾಗುವುದನ್ನು ನೋಡಬಹುದು.

ತಾಯ್ನುಡಿಯಷ್ಟೆ, ಶ್ರೇಷ್ಠವಾದದ್ದು ಜನ್ಮಭೂಮಿ. ತಾಯ್ನುಡಿ, ತಾಯ್ನೆಲದ ಮೇಲೆ ಮಮಕಾರ ಇಲ್ಲದಿರುವವರು ಇದ್ದರೂ ಇಲ್ಲದಂತೆ ಎಂಬ ಮಾತೊಂದಿದೆ. ಪಂಪ ಹೀಗೆ 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಸಮಂ' ಎಂದಂತೆ. ಯಾರಂಕುಶ ಇಟ್ಟರೂ ಕನ್ಯಾನವ ನೆನಯುವಷ್ಟು ತಾಯ್ನೆಲದ ಮೇಲೆ ಅಭಿಮಾನ ಭಾಸ್ಕರ ಕನ್ಯಾನರಿಗೆ. ಇವರ ಮೊದಲ ಕವನ ಸಂಕಲನ 'ಕನ್ಯಾನ' ಈ ಸಂಕಲನದಲ್ಲಿ ಇದೇ ಹೆಸರಿನ ಕವನ ಬಂದಿದೆ.

"ಕನ್ಯಾನವೆಂದರೆ 'ಕನ್ಯಾ–ನ' ಅಲ್ಲ

ನನ್ನ ತಾಯ ಕನ್ಯತ್ವ ಕಳೆದ ನಾ ಜೀವ ತಳೆದ

ಮಣ್ಣು: ಮೊದಲು ಹಸುರನು ಕಂಡುದಿಲ್ಲೆ

ನನ್ನ ಹಸುಳೆಗಣ್ಣು

ದೇವಕಿಯ ಗರ್ಭದಿಂದುದಿಸಿಯೂ ಕೃಷ್ಣನಾಗದೆ

ತಂದೆ ನಾರಾಯಣನ ಕಾಣದೆ

ಮಾವಂದಿರಾಶ್ರಯದಲ್ಲಿ ಬೆಳೆದೂ ಬೆಳೆಯದೆ

ನನ್ನ ಅಜ್ಜ ಅಜ್ಜಿಯರ ಕನ್ಯಾನ

ವನ್ನುಳಿಸಿಕೊಳ್ಳುವುದಾಗಿಲ್ಲವೇಕೆ ಎನ್ನುವುದೆ

ನನ್ನ ದುಮ್ಮಾನ ಕನ್ಯಾನ ನನ್ನ ತೊರೆಯದೆ

ನಾನೇ ತೊರೆದೆ ಮುಂದೇನೂ ತೋರದೆ

'ಆರಂಕುಸಮಿಟ್ಟೊಡಂ... ನೆನಪಿನ ಕಂಪ

ನಾ ಘ್ರಾಣಿಸುವೆನೆನೆ ನಾನಲ್ಲ ಪಂಪ'

ಈ ಕವನ ಕವಿಯ ಬಾಲ್ಯಜೀವನ ತಂದೆಯನ್ನು ಕಳೆದುಕೊಂಡು ಬದುಕಿದ ನೆನಪನ್ನು ಮತ್ತೆ ಮತ್ತೆ ಮೆಲುಕು ಹಾಕುವಂತೆ ಮಾಡುತ್ತದೆ. ಕವಿ ಪಂಪನ ಮನಸ್ಸು 'ಬನವಾಸಿ'ಯನ್ನು ಮತ್ತೆ ಮತ್ತೆ ನೆನೆಯುವಂತೆ ಅಂಶುಮಾಲಿಯವರಿಗೂ ಕನ್ಯಾನ'ನದ ಜೊತೆಗೆ ಬಿಟ್ಟರೂ ಬಿಡಲಾಗದ ನಂಟಿದೆ. ಇನ್ನು 'ಪ್ರತಿಭಾನ' ಸಂಕಲನದಲ್ಲಿಯೂ 'ಕನ್ಯಾನಕ್ಕೊಂದು ಅಖ್ಯಾನ' ಎನ್ನುವ ಕವನವಿದೆ. ಇದು ಕನ್ಯಾನದ ಜನಜೀವನದ ಕುರಿತಿದೆ. 'ಎಲ್ಲ ತಪ್ಪಿದರೂ ದಾರಿ, ಧರೆ ಹಾರಿ ಮುಟ್ಟಬಹುದು. ಅವರವರ ಮನೆ, ಆಕ್ಷೇಪಿಸುವುದಿಲ್ಲ ಯಾರೂ ಎಂದೂ ಶ್ವಾನವೊಂದಲ್ಲದೆ ಸುಮ್ಮನೆ" ಎಂಬ ಮಾತಿನಲ್ಲಿ ಕನ್ಯಾನಕ್ಕೆ ಇನ್ನೂ ನಗರೀಕರಣದ ಗಾಳಿ ಬೀಸಿಲ್ಲ. ಬರೀ ನಾನು-ನನ್ನದು ಎಂಬ ಸ್ವಾರ್ಥ ತುಂಬಿಕೊಂಡಿಲ್ಲ ಎಂಬುದು ಕವನದ ಈ ಸಾಲಿನಿಂದ ತಿಳಿದುಕೊಳ್ಳಬಹುದು. ಇನ್ನೂ 'ಕನ್ನಡ-ಕ' ಎಂಬ ಸಂಕಲನದಲ್ಲಿಯೂ 'ಕನ್ಯಾನವೆಂದರೆ' ಎನ್ನುವ ಕವನ ಒಂದಿದೆ.

'ಯಾರೋ ಕೇಳಿದರು ಕನ್ಯಾನವೆಂದರೇನೆಂದು, ಹೇಳಿದೆ

ಇನ್ನೂ ಗೊತ್ತಾಗಿಲ್ಲವೆಂದು ನಕ್ಕು ಅವರೆಂದರು

ಊರಿಗೆ ಎಂಥ ಕಾವ್ಯಮಯ ಹೆಸರು"

ಈ ಕವನದ ಕೊನೆಯಲ್ಲಿ ಕನ್ಯಾನಕ್ಕೆ ಶುಭ ಹಾರೈಸುತ್ತಾರೆ. ಎಂದಾದರೂ ಒಮ್ಮೆ ತಾನು ಕನ್ಯಾನಕ್ಕೆ ಹೋದರೆ ತನ್ನನ್ನು ಯಾರೆಂದು ಗುರುತು ಹಚ್ಚಲಿ ಅಲ್ಲಿನ ಜನ ಎಂಬ ಆಶಯವಿದೆ.

ಅಂಶುಮಾಲಿಯವರ ಕವನ ಸಂಕಲನಗಳಲ್ಲಿ ಹಾಸ್ಯವನ್ನು ಚೆನ್ನಾಗಿಯೆ ದುಡಿಸಿಕೊಂಡಿದ್ದಾರೆ. ಇವರ 'ಪ್ರತಿಭಾನ' ಸಂಕಲನದ ಮುನ್ನುಡಿಯಲ್ಲಿ ಬಿ. ಜನಾರ್ಧನ ಭಟ್ಟರು ಹೇಳುವಂತೆ "ಕವಿ ಅಂಶುಮಾಲಿಯವರ 'ಪ್ರತಿಭಾನ' ಸಂಕಲನದ ಕೆಲವು ಕವಿತೆಗಳು ಈ ಕವಿಯಲ್ಲಿ ಒಂದು ಬೆಳವಣಿಗೆಯ ಹಂತವನ್ನು ಕಾಣಿಸಿರುವಂತೆ, ಕನ್ನಡ ಕಾವ್ಯ ಸಂದರ್ಭದಲ್ಲಿಯೂ ಹೊಸದಾದ, ಲವಲವಿಕೆಯ ಕಾವ್ಯ ಶೈಲಿಯೊಂದನ್ನು ಉದ್ಘಾಟಿಸಿದೆ. ಕನ್ನಡದಲ್ಲಿ ಈ ರೀತಿ ಯಾರೂ ಬರೆದಿಲ್ಲವೆ ಎಂದರೆ ಬರೆದಿದ್ದಾರೆ. ದೀರ್ಘ ಪರಂಪರೆಯುಳ್ಳ ಹಾಸ್ಯ ಕವನಗಳಿಗೂ, ಅಂಶುಮಾಲಿಯವರ ಈ ಕವನಗಳಿಗೂ ಬಂದು ಸಂಬಂಧವಿರುವಂತೆ ಭಿನ್ನತೆಯೂ ಇದೆ. ಅದೇನೆಂದರೆ ಅನುಭಾವವನ್ನು ಹಾಸ್ಯ ದರ್ಶನದಲ್ಲಿ ಕಾಣಿಸುವುದು ಈ ಕವಿತೆಗಳ ಹೆಚ್ಚುಗಾರಿಕೆ. ಇದುವರೆಗೆ ಯಾರೂ ಕೂಡ ಇಷ್ಟು ಲಘುವಾಗಿ ಆಧ್ಯಾತ್ಮಿಕ ಒಳನೋಟಗಳನ್ನು ನೀಡಿದ್ದಿಲ್ಲ. ಹೀಗಾಗಿ ವಸ್ತುವಿನ ಗಹನತೆಯೂ (ಆತ್ಮ) ನಿರೂಪಣೆಯ ಲಘುತ್ವವು (ದೇಹ) ಒಂದಕ್ಕೊಂದು ತಾಳಮೇಳವಿಲ್ಲದೆ ವಿಚಿತ್ರ ಅರಿವನ್ನು ನಮ್ಮ ಮುಂದಿಡುತ್ತದೆ." ಈ ಮಾತು ಅಂಶುಮಾಲಿಯವರ ಕವನಗಳ ಒಟ್ಟು ವಿವರವನ್ನು ನಮ್ಮ ಮುಂದಿಡುತ್ತದೆ.

ಇವರ ಮೊದಲ ಸಂಕಲನದಲ್ಲಿರುವ (ಕನ್ಯಾನ) ಪತ್ರೊಡೆ ಕವನದಲ್ಲಿ ದಾಂಪತ್ಯವೇ ವಸ್ತು ಗಂಡ-ಹೆಂಡಿರ ಮುಚ್ಚಿದ ಪೆಟ್ಟಿಗೆ ತೆರೆದಾಗ ಬಯಲಾಗುವ ರಹಸ್ಯವನ್ನು ತಿಳಿ ಹಾಸ್ಯದ ಮೂಲಕ ಹೇಳುತ್ತಾರೆ. ಪ್ರತಿಭಾನದಲ್ಲಿರುವ ಇನ್ನೊಂದು ಕವನ ಹಾಗಲಕಾಯಿ.

"ಇದೇನು ಹಾಗಲ ಬೇರೇನೂ ಸಿಗಲಿಲ್ಲ.

ಸಿಡಿಮಿಡಿಗುಟ್ಟಿದಳು ನನ್ನವಳು

ಹಾಗಲ್ಲ, ಹಾಗಲ ಹಾಗೆಲ್ಲ ಸಿಗುವುದಿಲ್ಲ.

ಒಳ್ಳೆಯದು ಮೈಗೆ ಮನಸ್ಸಿಗೆ, ಬೆಲ್ಲ

ಹಾಕಿದರಾಯಿತು ಕಹಿಗೆ ಎಂದೆ

ಕಲಸಿಕೊಡಬೇಕಾಗಿಲ್ಲ ಎಂದು ದುಡು ನಡೆದಳು ಒಳಗೆ"

'ಕನ್ನಡಕ' ಸಂಕಲನದಲ್ಲಿರುವ ಮುಳ್ಳುಸೌತೆಯು ಕೂಡ ಹಾಸ್ಯವನ್ನೇ ವಸ್ತುವಾಗಿಸಿಕೊಂಡಿದೆ. ಕವಿ ದುಂಡಿರಾಜರ ಮನೆಗೆ ಮುಳ್ಳುಸೌತೆಕಾಯಿ ಕೊಂಡು ಹೋಗಿ, ದುಂಡಿರಾಜರ ಮಡದಿಯನ್ನು ದುಂಡಿರಾಣಿ ಎನ್ನುವ ಮೂಲಕ ಲಘು ಹಾಸ್ಯರಸವನ್ನು ಉಕ್ಕಿಸುತ್ತಾರೆ.

ಅಂಶುಮಾಲಿಯವರ ಕವನದ ವಸ್ತು ಕೇವಲ ಹಾಸ್ಯ, ನಾಡು-ನುಡಿ ಮಾತ್ರವಾಗಿರದೆ, ಸಮಕಾಲೀನ ಆಗು-ಹೋಗುಗಳ ಸ್ಪಂದನೆ ಇರುವ ಕವನಗಳು ಅನೇಕ ಇವೆ. ಉದಾ: ಇವರ ಕನ್ಯಾನ ಸಂಕಲನದ 'ರಕ್ಷಿಸು' ಕವನದ ಸಾಲುಗಳನ್ನು ನೋಡಬಹುದು.

ಹಿಂದು ಬೌದ್ಧ ಜೈನ ಮುಸ್ಲಿಂ ಕ್ರೈಸ್ತ
ಫಾರಸಿ ಸಿಖ್ಖ ನಾಸ್ತಿಕ, ಆಸ್ತಿಕ
ತಲೆ ಪಟ್ಟಿ ಕಟ್ಟಿ ಹುಟ್ಟಿ ಬಂದವರ
ಹುಟ್ಟಿ ಮತ್ತೊಂದಾದವರ ಏನೂ
ಆಗದವರ ಮತ ಜಾತಿ ಕುಲ ನೀತಿ ಮೇಲು
ಕೀಳೆಂದು ಹೊಡೆದಾಡುವವರ ಮನುಜ
ಕುಲವೊಂದೆವಲಂ ಎಂದು ಜೀವ
ಬಿಡುವವರ ಈ ಕೆನ್ನೆಗೂ
ಬಾರಿಸೆಂದು ಹೊಡೆಸಿಕೊಂಡವರ ಶಿಲುಬೆ
ಗೇರಿದವರ ಪ್ರವಾದಿಯಾದವರ ರಾಮಾ
ರಾಮಾ ಎಂದು ಎದೆ ಗುಂಡಿಗೆ ನೆತ್ತರು ಚೆಲ್ಲಿ
ಹುತಾತ್ಮರಾದವರ
................
ಇರಲಿ ರಕ್ಷಿಸು.

ಇಲ್ಲಿ ಕವಿಯಲ್ಲಿರುವ ಕ್ಷಮಾ ಗುಣವೇ ಮೈವೆತ್ತಿದಂತಿದೆ. ಪ್ರಪಂಚದ ಎಲ್ಲಾ ಆಗು-ಹೋಗುಗಳು ಇಲ್ಲವೆ, ಆ ಧರ್ಮ, ಈ ಧರ್ಮ ಎನ್ನುವ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎನ್ನುವ ಭೇದ ಇಲ್ಲದೆ ಅವರು ಎಲ್ಲೆ ಇರಲಿ ರಕ್ಷಿಸು, ಮಾಡಿದ ತಪ್ಪುಗಳನ್ನೆಲ್ಲಾ ಕ್ಷಮಿಸು ಎನ್ನುವ ಮೂಲಕ ಅಜ್ಞಾನದಲ್ಲಿರುವ ಮನುಕುಲವನ್ನು ರಕ್ಷಿಸುವುದಕ್ಕಾಗಿ ಕಾಣದ ದೇವರಲ್ಲಿ ಕವಿ ಮೊರೆ ಇಡುತ್ತಿದ್ದಾರೆ ಇಲ್ಲಿ.

ಈಗ ನಮ್ಮ ದೇಶದ ರಾಜ್ಯ-ರಾಜ್ಯಗಳ ನಡುವಿನ ಗಡಿ ಸಮಸ್ಯೆ, ಪ್ರತ್ಯೇಕ ರಾಜ್ಯದ ಕೂಗು ಗಡಿ ಸಮಸ್ಯೆ ಮತ್ತು ಕಾವೇರಿ ವಿವಾದವನ್ನು ವಸ್ತುವಾಗುಳ್ಳ ಇವರ ಕವನ ಯಾರಲ್ಲಿ ಹೇಳೋಣ..

"ಗಡಿನಾಡಿನಲ್ಲಿ ಗಡಿಬಿಡಿಯಲ್ಲಿ ಗಡಿ-ಬಿಡಿ
ಗಲಾಟೆಯಿದ್ದರೂ ಹಿಡಿದ ಗಡಿ ಬಿಡಬೇಕು ಏಕೆ
ರೆಡಿಗೇಡಿ ಎಡೆಬಿಡಂಗಿಗಳಿದ್ದರೂ ನಡುವೆ
ಯಾದವೀಕಲಹದಾವಾಹನೆಗೆ ಚಾಲನೆ
ಅಲ್ಲ ರಾಜಕೀಯವೆನೆ, ಯಾವುದು
ಕಾರಣೀಭೂತ ನರಬಲಿಗೆ ?

ಅಂದುಗಂಗೆಯನಿಳಿಸಿದನು ಭಗೀರಥ

ನೆನುವುದು ಪುರಾಣ । ಆ ಭಾಗೀರಥಿಯ

ಕಾವೇರಿಗೆ ಬಂದಿಳಿಯುವ ಯೋಜನೆ

ಇಂದು ಹೈರಾಣ । ಕಾರಣ ?

ಹರಿಯುತ್ತಿದೆ ಕದಡಿದ ನೀರು ಕಾವೇರಿಯಲಿ

ಕೆನ್ನೀರು ಕುಡಿಯಬಲ್ಲವರಾರು

ಎಲ್ಲಾ ಗಲಾಟೆ, ವಿವಾದಗಳ ಹಿಂದೆ ರಾಜಕೀಯದ ಹುನ್ನಾರ ಇರುವ ಸತ್ಯವನ್ನು ಈ ಕವನದಲ್ಲಿ ಚಿತ್ರಿಸಿದ್ದಾರೆ. ಅಂಶುಮಾಲಿಯವರು ತಮ್ಮ 'ಕನ್ನಡ-ಕ' ಸಂಕಲನದಲ್ಲಿ ರಾಜಕಾರಣ ಮತ್ತು ರಾಜಕಾರಣಿಗಳನ್ನು ಲಘು ಹಾಸ್ಯದ ಮೂಲಕ ವಿಡಂಬಿಸುವ ಕೆಲಸವನ್ನು ಮಾಡಿದ್ದಾರೆ. ಉದಾ : ಈ ಸಂಕಲನದ ಇಂಥವರು ಕವನ.

"ಇವರು ಭಾಷಣಕ್ಕೆ ನಿಂತಾಗ, ಸ್ಫೂರ್ತಿಯುಕ್ಕಿ ಹರಿಯುತ್ತದೆ.

ಧ್ವನಿ ಭಾವಾದೇಶಕ್ಕೇರಿ ಸರಿಯುತ್ತದೆ

ಮೊಸಳೆ ಕಣ್ಣೀರು ಹರಿಯುತ್ತದೆ

ಗರೀಬೋಂಕೋ ಹಟಾವೊ

ಎಂದು ಘೋಷಿಸಿ ಬೆಚ್ಚಿ-

ನಾಲಗೆ ಕಚ್ಚಿ

ಕ್ಷಮಿಸಿ ತಪ್ಪಿದೆ - ಗರೀಬೀ ಹಟಾವೋ

ಎಂದಾಗ

ಇವರಂತರಂಗ ಕಪ್ಪು

ವ್ಯವಹಾರ ಕಪ್ಪು

ಅರ್ಥ ಕಪ್ಪು

ಎಂದು ಅರ್ಥೈಸಿಕೊಳ್ಳಲಾಗದ ಬೆಪ್ಪು

ತಕ್ಕಡಿಗಳಾಗಿ ಉಳಿದರೆ

ಕುರಿಮಂದೆಗಳಾಗಿ ಬಾಳಿದರೆ

ಯಾರದು ತಪ್ಪು ?

ಇಂತಹ ಕವನಗಳ ಮೂಲಕ ರಾಜಕರಾಣವನ್ನು ನಿರ್ಭಿಡೆಯಿಂದ ಟೀಕಿಸಿದ್ದಾರೆ. ರಾಜಕಾರಣಿಗಳ ಸುಳ್ಳು ಆಶ್ವಾಸನೆಗೆ ಮರುಳಾಗುವ ಜನರನ್ನು 'ಬೆಪ್ಪು' ಎನ್ನುವ ಮೂಲಕ ರಾಜಕಾರಣಿಗಳನ್ನು ಕಣ್ಣುಮುಚ್ಚಿ ನಂಬುವ ಆ ಮೂಲಕ ಕುರಿಮಂದೆಗಳಾಗಿ ಬದುಕುವ ಜನರದೇ ತಪ್ಪು ಎಂದು ಎಷ್ಟು ನಿಷ್ಠುರವಾಗಿ ಹೇಳಿದ್ದಾರೆ. ಸಮಾಜವನ್ನು, ಪ್ರಜೆಗಳನ್ನು ಹಾಸ್ಯದ ಮೂಲಕ, ವ್ಯಂಗ್ಯದ ಮೂಲಕ ಎಚ್ಚರಿಸುವ ಕೆಲಸವನ್ನು ಅಂಶುಮಾಲಿಯವರ ಈ ಬಗೆಯ ಕವನಗಳು ಮಾಡುತ್ತವೆ.

ಇನ್ನು ಶಿಕ್ಷಣದ ಅರಿವು ಮತ್ತು ಇವತ್ತಿನ ಮೋಜು, ಮಸ್ತಿಯಲ್ಲೇ ಕಾಲ ಕಳೆಯುವ ವಿದ್ಯಾರ್ಥಿಗಳಿಗೆ ತಿಳಿ ಹೇಳುವಲ್ಲಿಯೂ ಶ್ರೀಯುತರ ಕವನ ಕೆಲಸ ಮಾಡುತ್ತದೆ. ಇವರ ಪ್ರತಿಭಾನ ಸಂಕಲನದಲ್ಲಿ 'ಉತ್ತಿಷ್ಠತ' ಕವನವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

'ಎದ್ದು ನಿಲ್ಲು ಇದ್ದಲ್ಲೇ ನೀನು ವಿದ್ಯಾರ್ಥಿ, ವಿದ್ಯಾರ್ಥಿನಿ

ಎರಡು ಕಣ್ಣುಗಳ ಒಂದು ಮುಖದಲ್ಲಿ ದೃಷ್ಟಿಯೊಂದೆ ಪಥ ನೀ

ಕಳೆಯಬೇಡ ಕ್ಷಣ ಕಾಲ ಬಾರದಿಹ ಕಾಲಮಾನ ಬರಿದೆ

ಬಳಸದಿರು ಕೃತುಶಕ್ತಿಯನ್ನು ವೇದಿಕೆಯು ನಿನ್ನವಿರದೆ

ಯಾರು ಎಳೆದರೇನೆತ್ತ ನಿನ್ನ ಸ್ಥಿತಿ ಸ್ಥಾಪಕತ್ವ ಗುಣವ

ಉಳಿಸಿಕೊಂಡು ಕಲಿ 'ಕಲಿಯೆ' ಆಗು ನೀ ನೀಗು ಬಲಿಯ ಗುಣವ

ಮರೆಯಬೇಡ ನೀ ನಿನ್ನ ನೆಲೆಯ ನೀ ಹೊಂದುವಂಥ ಬೆಲೆಯ

ನಿನ್ನದೇ ವ್ಯಕ್ತಿತ್ವ ವೈಶಿಷ್ಟ್ಯ ಉಳಿಸಿ ಬೆಳೆಸು ಕಲೆಯ

ಏನು ಬೇಕು ನಿನಗೇನು ಬೇಡ ಅದನರಿತು ಕೊಡುವ ಗುರುವ

ಮರೆಯಬೇಡ ಅದೇ ಮಾರ್ಗದರ್ಶನವು ಭಾಗ್ಯವನ್ನೇ ತರುವ

ಕಟ್ಟುಶಾಲೆಯನ್ನು ಕಟ್ಟುಮನೆಯನು ಕಟ್ಟು ನಾಡನ್ನು ಬೆಳಗಿ

ಕಟ್ಟು ನಿಟ್ಟಿನಲಿ ಮಾನ್ಯ ಪ್ರಜೆಯಾಗು ಮಾನ್ಯ ಪ್ರಭುವಾಗು ತೊಳಗಿ

ಇನ್ನು ಆಧ್ಯಾತ್ಮದಂತಹ ವಸ್ತು ಕೂಡ ಅಂಶುಮಾಲಿಯವರ ಕೈಯಲ್ಲಿ ಲೀಲಾಜಾಲವಾಗಿ ಪಳಗಿದೆ. ಇದಕ್ಕೆ ಇವರ 'ಮಣ್ಣು', ಒಡೆದು ಹೋದದ್ದು, 'ಮಂಡೂಕಗಮನ', ಪರಿಭ್ರಮಣ 'ಕಾಂಡ'ದಂತಹ ಕವನಗಳನ್ನು ಇಲ್ಲಿ ಹೆಸರಿಸಬಹುದು.

ಉದಾ : ಮಣ್ಣೆಂದರೆ ನಾವೆ ? ಮುಳುಗುವ ನಾವೆಯು ಕೂವೆಯ

ಮೇಲೇರಿ ಪ್ರತೀಕ್ಷೆಯ ದಡ ಮುಟ್ಟುವ

ತಪ್ಪಿಸಿಕೊಳ್ಳಬಲ್ಲೆವೆ ಹಸಿವು ಬಾಯಾರಿಕೆ ಸುಕ್ಕು

ಗಟ್ಟುವ ತ್ವಚೆ ಹಾರಿಹೋದರೂ ನೀಹಾರಿಕೆಯಾಚೆ ?

ಎಂದು ಈ ಕವನದಲ್ಲಿ ಬದುಕಿನ ವಾಸ್ತವವನ್ನು ಹೇಳಿದ್ದಾರೆ. ಇಲ್ಲಿ ಆಧ್ಯಾತ್ಮ ಎನ್ನುವುದು ಕವಿಗೆ ಜೀವನ ವಿಮುಖ ಚಿಂತನೆಯಿಲ್ಲ. ಬದುಕೆಂದರೆ ಇಂದು ಇದ್ದೇವೆ ಸತ್ಯ, ನಾಳೆ ಎಂಬುದು ಮಿಥ್ಯೆ. ಕವಿಯೆ ಹೇಳುವ ಹಾಗೆ ಜೀವನ ಒಂದು ಆಟ. ಜೀವ ಎನ್ನುವ ಚೆಂಡು ಮೈದಾನದಲ್ಲಿ. ಅಲ್ಲಿ ಹೆಣ್ಣು-ಗಂಡುಗಳೆಂಬುದು ಎರಡು ಆಡುವ ತಂಡಗಳು. ಇಲ್ಲಿ ಕಣ್ಣಿಗೆ ಕಾಣದ ಅನುಭಾವವು ಭಯ ಹುಟ್ಟಿಸುವಂತಾದಲ್ಲ. ಬದುಕಿನ ಬಹಳ ಮಹತ್ವದ ಅನುಭವವೊಂದು ಸ್ವಲ್ಪ ಲಘುವಾಗಿ ಹಾಸ್ಯ ಅನಿಸಿದರೂ, ಬಹುಶಃ ಇದು ಕವಿಯೊಬ್ಬ ಅನುಭವದಿಂದ ಮಾಗಿದಾಗ ಮಾತ್ರ ಸಾಧ್ಯ ಎನಿಸದೆ ಇರದು.

'ಪ್ರತಿಭಾನ' ಸಂಕಲನದಲ್ಲಿರುವ ಇನ್ನೊಂದು ಮಹತ್ವದ ಕವನ 'ಕಾಂಡ' ಧರ್ಮಚಿಂತನೆಯ ತಾತ್ವಿಕತೆ ಈ ಕವನದೊಳಗೆ ಎಷ್ಟು ಗಟ್ಟಿಯಾಗಿದೆ ಎಂದರೆ ಇವತ್ತು ವ್ಯರ್ಥವಾಗಿ ಜಾತಿ, ಮತ, ಧರ್ಮ, ಪಂಥಗಳೆಂದು ಇರುವ ವ್ಯವಸ್ಥೆಯನ್ನು ಬಗೆಯುತ್ತಾ ಹೋಗಿ ಹುಯಿಲೆಬ್ಬಿಸುವ ಮತೀಯವಾದಿಗಳೊಮ್ಮೆ ಈ ಕವನವನ್ನು ಓದಿಕೊಳ್ಳಬೇಕು ಎನಿಸುತ್ತದೆ.

"ಗೊತ್ತಿಲ್ಲ ಯಾರು ಎಲ್ಲಿಂದ ಬಂದರು ಯಾರು

ಯಾರಿಗೆ ಬೇರು ಎಲ್ಲಿ ಹೋಗುತ್ತಿರುವುದು ಸತ್ತವರು

ಏನು ಜಾತಿ ನೀತಿ ಮತ ಧರ್ಮ ಕರ್ಮವೆನ್ನುವ ಮರ್ಮ

ಪಾಪ ಪುಣ್ಯದ ಲೇಪ ? ಹಣೆ ಪಟ್ಟಿ ಕಟ್ಟಿ ಕುದುರೆಯ ದಿಟ್ಟಿ !

ಯಾರು ಓಡಿಸುತ್ತಿದ್ದಾರೆ ಮನೋರಥ ಬೇಕಾಬಿಟ್ಟಿ ?

ಯಾರೂ ಇತಿಹಾಸಕಾರ ಸತ್ಯವನ್ನು ಸುಳ್ಳಾಗಿಸಿ, ಸುಳ್ಳನ್ನು ಸತ್ಯವಾಗಿಸಿ ಬರೆದಿಟ್ಟದ್ದನ್ನೇ, ಇತಿಹಾಸವಾಗಿ ಅದೇ ಇಂದು ಸತ್ಯವೆಂದು. ಅವನನ್ನೇ ಹಿಡಿದು ಕೊಲ್ಲೋಣವೆಂದರೆ ಅವನೂ ಇಂದಿಲ್ಲ ಸತ್ತಿದ್ದಾನೆ. ಇಂದು ನಾವು ನಾವೇ ನಮ್ಮನ್ನು ಕೊಂದುಕೊಳ್ಳುವುದೇ ನಾಳಿನ ಇತಿಹಾಸ ಎಂಬುದು ವಿಪರ್ಯಾಸ ಎನ್ನುತ್ತಾರೆ ಕವಿ ಇಲ್ಲಿ.

ಇದೇ ಸಂಕಲನದ ಇನ್ನೊಂದು ಕವಿತೆ 'ಅಪವಾದ' ಇದೊಂದು ಬಗೆಯ ಸಾಪೇಕ್ಷವಾದವನ್ನು ಮುಂದಿಡುತ್ತದೆ.

'ದೊಡ್ಡವರಾಗಿಯೂ ದೊಡ್ಡವರಾಗಿಲ್ಲ

ಸಣ್ಣವರಾಗಿಯೂ ಸಣ್ಣವರಾಗಿಲ್ಲ

ದೊಡ್ಡದು ದೊಡ್ಡದಾಗಿಯೂ ದೊಡ್ಡದಾಗಿಲ್ಲ

ಸಣ್ಣದು ಸಣ್ಣದಾಗಿಯೂ ಸಣ್ಣದಾಗಿಲ್ಲ

ಎಂದೇಕೆ ನಿಮಗೆ ಗೊತ್ತಾಗುವುದಿಲ್ಲ ?

ಕುವೆಂಪುರವರ ಇಲ್ಲಿ ಯಾರೂ ಶ್ರೇಷ್ಠರಲ್ಲ, ಯಾರೂ ಕನಿಷ್ಠರಲ್ಲ. ನೀರೆಲ್ಲವೂ ತೀರ್ಥ ಎಂಬ ಮಾತು ನೆನಪಾಗುತ್ತದೆ. ಇಲ್ಲಿ ಅಂಶುಮಾಲಿಯವರ ಹಿರಿತನವನ್ನು ಕಾಣಬಹುದು.

ಅಂಶುಮಾಲಿಯವರು ಸ್ತ್ರೀವಾದಿ ನೆಲೆಯಲ್ಲೂ ಕವನ ರಚಿಸಿದ್ದಾರೆ. ಸ್ತ್ರೀಪರ ಕಾಳಜಿ ಇರುವ ಹಲವು ಕವನಗಳಿವೆ. ಇವರ 'ಪ್ರತಿಭಾನ' ಸಂಕಲನದಲ್ಲಿರುವ ಕವನ 'ಮಿಲನ'

ವರವನು ಪಡೆದ ಕುಮಾರಿ ಕುಂತಿ

ನಡೆದಳು ಬ್ರಾಹ್ಮೀ ಮುಹೂರ್ತದಲ್ಲಿ ಗಂಗೆಯ ತಡಿಗೆ

ಮಂತ್ರೋಚ್ಚಾರದಲ್ಲಿ ನೆನೆದಳು ಸೂರ್ಯನ

ವಿಷಯ ಅರ್ಥಗರ್ಭಿತ ನಗು.

ಕಾಣಿಸಿಕೊಂಡನು ಕಣ್ಣುಕುಕ್ಕುವ ಸೂರ್ಯ

ಕಣ್ಣು ಮುಚ್ಚಿದಳು, ತಲೆ ತಗ್ಗಿಸಿದಳು

ಪಿಸುಗುಟ್ಟಿದಳು, ಆರ್ಯ....

ಹಾಯೆನ್ನಿಸುವ ಶಾಖ ಹಾಯ್

ಎನ್ನಿಸಿ ಸುಡುಸುಡು ಅನುಭವ ಸುಖ

ಹಲವು ಮುಖ । ಛಿಲ್ಲನೆ ರಕ್ತ

ರಂಜಿತ ಆಕಾಶವೆನೆ ಕಿಟಾರನೆ

ಕಿರುಚಿ ಮಗು

ಸಂಧ್ಯೆಯ ಸಹಾನುಭೂತಿ ನಗು

ಇಳಿದನು ಸೂರ್ಯನು ಕಡಲಿಗೆ

ಇರಿಸಿ ಮಗುವನು ಮಡಿಲಿಗೆ

ಮಗು ಬಿದ್ದಿತು ಗಂಗೆಯ ಒಡಲಿಗೆ

ಹಾಕಿ ಕೊಟ್ಟಳೆ ಕುಂತಿ

ಹೀಗೊಂದು ಮೇಲ್ಪಂಕ್ತಿ

ಮಹಾಭಾರತದ ಘಟನೆಯೊಂದು ಈ ಕವಿತೆಯ ವಸ್ತುವಾದರೂ, ಈಗಿನ ಸಮಾಜದಲ್ಲಿ ತಪ್ಪು ಹೆಣ್ಣು-ಗಂಡು ಇಬ್ಬರದಾದರೂ ಬೆರಳು ಮಾಡಿ ತೋರುವುದು ಹೆಣ್ಣಿನೆಡೆಗೆ. ಅದು ಅಂದಿನ ಕುಂತಿಯನ್ನು ಬಿಟ್ಟಿಲ್ಲ. ಇಂದಿನ ಇಪ್ಪತ್ತೊಂದನೇ ಶತಮಾನ ಹೆಣ್ಣನ್ನು ಬಿಟ್ಟಿಲ್ಲ ಎನ್ನುವುದನ್ನು ಕವನದ ಕೊನೆಯ ಎರಡು ಸಾಲುಗಳು ಧ್ವನಿಸುತ್ತವೆಯೊ ಅನಿಸುತ್ತದೆ. ಹೀಗೆ ಶ್ರೀಯುತರ ಮೂರು ಕವನ ಸಂಕಲನಗಳಲ್ಲಿ ಸುಮಾರು ನೂರಾ ಎಂಬತ್ತೊಂದು ಕವನಗಳಿವೆ. ಅದರಲ್ಲಿ ಗಟ್ಟಿ ಹಲವಿದೆ. ಜೊಳ್ಳು ಕೆಲವೇ ಕೆಲವಿದೆ. ಟಿ.ಎಸ್. ಎಲಿಯಟ್ ಹೇಳುವಂತೆ ಶ್ರೇಷ್ಠ ಕವಿಯೊಬ್ಬ ಬರೆದದ್ದೆಲ್ಲಾ ಶ್ರೇಷ್ಠವಾಗಬೇಕೆಂದೇನಿಲ್ಲ. ಅದು ಅಂಶುಮಾಲಿಯವರಿಗೂ ಅನ್ವಯಿಸುತ್ತದೆ.

ಇನ್ನು ಸುಮಾರು ಐದು ನೂರು ಪುಟಕ್ಕಿಂತ ಹೆಚ್ಚಿರುವ ಶ್ರೀ ಭಾಗವತವನ್ನು ಶ್ರೀಯುತರು ಸರಳ ಕನ್ನಡದಲ್ಲಿ ಮುಕ್ತ ಛಂದಸ್ಸನ್ನು ಬಳಸಿ ಬರೆದಿದ್ದಾರೆ. ಇದು ಅಂಶುಮಾಲಿಯವರ ಮಹಾಕಾವ್ಯ. ಅಂಶುಮಾಲಿಯವರೇ ಹೇಳುವಂತೆ ಓದಿದವರಿಗೂ ಪುಣ್ಯ ಕೇಳಿಸಿಕೊಂಡವರಿಗೂ ಪುಣ್ಯ. ಆದ್ದರಿಂದಲೇ ಕೆಲವರಿಗೆ ತಲುಪಿದ ಶ್ರೀ ಭಾಗವತವನ್ನು ಹಲವರಿಗೆ ತಲುಪಿಸುವುದಕ್ಕಾಗಿಯೇ ಬರೆದಿದ್ದೇನೆ ಎಂಬ ಕವಿ ಮಾತಿನಲ್ಲಿ ಸರಳ ಸಜ್ಜನಿಕೆಯ ಮುಗ್ಧತೆ ಕಾಣಿಸುತ್ತದೆ. ನವ್ಯೋತ್ತರದ ಕವಿಯಾದ ಅಂಶುಮಾಲಿಯವರು ತಮ್ಮ ಸುತ್ತ ಮುತ್ತಲಿನ ಪ್ರತಿ ಆಗು-ಹೋಗುಗಳನ್ನು ತನ್ನ ಕವನದ ವಸ್ತುವಾಗಿಸಿಕೊಂಡಿದ್ದಾರೆ. ಯಾವುದೇ ಪ್ರಶಸ್ತಿ, ಗೌರವದ ಬೆನ್ನು ಹತ್ತಿ ಹೋಗಲಿಲ್ಲ. ಅಂಶುಮಾಲಿಯವರು ಹೆಚ್ಚೇನೂ ಪ್ರಸಿದ್ಧರಾಗಲಿಲ್ಲ. ಅದರಿಂದ ಇನ್ನಷ್ಟು ಸಾಹಿತ್ಯ ಕೃಷಿ ಆಗಲಿ. ಕನ್ನಡ ಪ್ರೇಮ, ಹಾಸ್ಯ, ಆಧ್ಯಾತ್ಮ, ವೈಚಾರಿಕತೆ, ಎಲ್ಲವೂ ಸಂಗಮವಾಗಿರುವ ಅಪರೂಪದ ಕವಿ ಶ್ರೀಯುತ ಅಂಶುಮಾಲಿಯವರು, ಅವರಿಂದ ಸಾಹಿತ್ಯ ಲೋಕ ಇನ್ನಷ್ಟು ಬೆಳಗಲಿ. ಈಗ ಓದುಗರಿಗೆ ಲಭ್ಯವಿಲ್ಲದ ಅವರ ಆರಂಭದ ಎರಡು ಸಂಕಲನಗಳು ಪುನರ್ ಮುದ್ರಣವಾಗುವುದು ಸಂತೋಷದ ವಿಷಯ. ಸದ್ದಿಲ್ಲದೆ ಸಾಹಿತ್ಯ ಸೇವೆ ಮಾಡುವ ಅಂಶು ಮಾಲಿಯವರಿಂದ ಇನ್ನಷ್ಟು ಸಾಹಿತ್ಯ ಸೇವೆ ನಡೆಯಲಿ ಎನ್ನುವುದು ನಮ್ಮ ಹಾರೈಕೆ.

**ಪರಾಮರ್ಶನ ಗ್ರಂಥಗಳು:**


೧. 'ಪ್ರತಿಭಾನ' ಕವನ ಸಂಕಲನ-ಅಂಶುಮಾಲಿ.

೨. 'ಕನ್ನಡ-ಕ' ಕವನ ಸಂಕಲನ-ಅಂಶುಮಾಲಿ

೩. ಕನ್ಯಾನ' ಕವನ ಸಂಕಲನದ-ಅಂಶುಮಾಲಿ.